

ನೀಲಗಿರಿ ಕಾಡುಗಳ ಎತ್ತರದ ಪ್ರದೇಶದಲ್ಲಿ ತೋಡ ಬುಡಕಟ್ಟು ಜನರ ಪುಟ್ಟ ಹಳ್ಳಿ

ವಿದ್ಯಾವಂತರಾಗಿದ್ದಾರೆ. ಒಂದು ಕಾಲದಲ್ಲಿ ಅಳಿವಿನಂಚಿನಲ್ಲಿದ್ದ ಈ ಸಮುದಾಯ, ಈಗ ಕೃಷಿ ಮತ್ತು ಹೈನುಗಾರಿಕೆಯನ್ನು ಸಹಕಾರಿ ವಲಯದಲ್ಲಿ ರೂಪಿಸಿಕೊಂಡು ಬದುಕಿನ ಗುಣಮಟ್ಟವನ್ನು ಹೆಚ್ಚಿಸಿಕೊಂಡಿದೆ. ಇವರು ಉತ್ಪಾದಿಸುವ ಹಾಲು ಮತ್ತು ಕಸೂತಿಯ ಮೂಲಕ ತಯಾರಿಸುವ ಬಟ್ಟೆಗಳು ಸಹಕಾರ ಸಂಘಗಳ ಮೂಲಕ ಮಾರಾಟವಾಗುತ್ತವೆ. ಊಟಿಯ ಹಲವು ಮಳಿಗೆಗಳಲ್ಲಿ ತೋಡರು ತಯಾರಿಸಿದ ವಿಶಿಷ್ಟ ಶಾಲುಗಳು ಮಾರಾಟಕ್ಕೆ ಇವೆ.

ತೋಡರ ಸಾಂಪ್ರದಾಯಿಕ ಮನೆಗಳನ್ನು ಬಿದಿರು, ಬೆತ್ತ, ಹುಲ್ಲಿನಿಂದ ನಿರ್ಮಿಸುತ್ತಾರೆ. ಸಿಮೆಂಟ್, ಕಬ್ಬಿಣದ ಬಳಕೆ ಇಲ್ಲ. ಆದರೆ ಮುತ್ತನಾಡ್ ಮಂಡ್‌ನಲ್ಲಿ ಅಂತಹ ಮನೆಗಳು ಕಾಣಸಿಗಲಿಲ್ಲ. ಈಗೇನಿದ್ದರೂ ಮಣ್ಣು, ಸಿಮೆಂಟ್ ಮತ್ತು ಹೆಂಚಿನ ಮನೆಗಳು ಬದಲಾಗುತ್ತಿರುವ ಜೀವನಶೈಲಿಗೆ ಸಾಕ್ಷಿಯಾಗಿವೆ. ಕೃಷಿ ಕೆಲಸ ಮಾತ್ರವಲ್ಲ, ಊಟಿಯಲ್ಲಿ ಖಾಸಗಿ ಸಂಸ್ಥೆಗಳಲ್ಲೂ ಹಲವರು ಕೆಲಸದಲ್ಲಿದ್ದಾರೆ.

'ನಾನು ಊಟಿಯಲ್ಲಿ ಹಿಂದೂಸ್ತಾನ್ ಫೋಟೊ ಫಿಲ್ಮ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದೆ. 1981ರಲ್ಲಿ ಬಿ.ಎಸ್ಸಿ. ಎರಡನೇ ವರ್ಷದಲ್ಲಿ ಇರುವಾಗಲೇ ಕೆಲಸ ಸಿಕ್ಕಿತು. ಆ ಕಂಪನಿ ಕೆಲವು ವರ್ಷಗಳ ಹಿಂದೆ ಮುಚ್ಚಿಹೋಯಿತು. ಇಬ್ಬರು ಮಕ್ಕಳೂ ವಿದ್ಯಾವಂತರು. ಒಬ್ಬ ತಮಿಳುನಾಡು ವಾಟರ್ ಬೋರ್ಡ್‌ನಲ್ಲಿ ಕೆಲಸ ಮಾಡುತ್ತಿದ್ದಾನೆ. ಇನ್ನೊಬ್ಬ ಐಟಿಸಿ ಕಂಪೆನಿಯಲ್ಲಿದ್ದಾನೆ. ಸೊಸೆ ಎಂ.ಎ., ಬಿ.ಎಡ್. ಪದವೀಧರೆ' ಎಂದರು ಟೆಕ್ಕಿಸ್ ಮೋಹನ್. ಹೊಲದಲ್ಲಿ ಸ್ಥಳೀಯ ಗೌಡ ಸಮುದಾಯದವರೂ ಕೂಲಿ ಕೆಲಸಕ್ಕೆ ಬರುತ್ತಾರೆ. ಈ ಊರಲ್ಲಿ ತೋಡ ಕುಟುಂಬಗಳಿಗೆ ಪ್ರತಿಯೊಬ್ಬರಿಗೂ ಐದಾರು ಎಕರೆಗಳ ಜಮೀನು ಇದೆ. ಆಲೂಗೆಡ್ಡೆ, ಕ್ಯಾರೆಟ್, ಕ್ಯಾಬೇಜ್ ಮತ್ತಿತರ ತರಕಾರಿಗಳನ್ನು ಹೇರಳವಾಗಿ ಬೆಳೆಯುತ್ತಾರೆ.

### ಮೂರ್ತಿ ಇಲ್ಲ, ಬೆಳಕೇ ದೇವರು!

'ನಮ್ಮ ಕೋವಿಲ್ ತೋರಿಸುತ್ತೇನೆ ಬನ್ನಿ' ಎಂದು ಅಲ್ಲೇ ಪಕ್ಕದಲ್ಲಿದ್ದ ದೇವಗುಡಿಗೆ ಕರೆದೊಯ್ದರು ಟೆಕ್ಕಿಸ್ ಮೋಹನ್. ಗುಡಿಯೂ ಮನೆಯ ಆಕಾರದಲ್ಲೇ ಇದೆ. ಗುಡಿಯ ಸುತ್ತ ವಿಶಾಲವಾದ ಬಯಲಿದ್ದು, ಮಧ್ಯೆ ಎತ್ತರದ ಸ್ತೂಪವೊಂದಿದೆ. ಈ ಪ್ರದೇಶದಲ್ಲಿ ಯಾರೂ ಚಪ್ಪಲಿ ಧರಿಸುವಂತಿಲ್ಲ. ಬರಿಗಾಲಲ್ಲಿ ಹುಲ್ಲಿನ ಮೇಲೆ ನಡೆಯುವಾಗ ಮೆತ್ತನೆಯ ಸ್ಪಂಜ್ ಮೇಲೆ ನಡೆದಂತಿತ್ತು. ಗುಡಿಯೂ ತಗ್ಗಿನಲ್ಲಿದೆ. ಗುಡಿಯೊಳಗೆ ಪೂಜಾರಿಯನ್ನು ಬಿಟ್ಟರೆ ಯಾರಿಗೂ ಪ್ರವೇಶವಿಲ್ಲ. 'ಪೂಜಾರಿಗಳು ನಮ್ಮೊಳಗಿನ ಉಪಕುಲಕ್ಕೆ ಸೇರಿದವರು. ಅವರು ಈ ಗುಡಿಯಲ್ಲೇ ವಾಸ ಮಾಡುತ್ತಾರೆ. ಹೆಚ್ಚು ಎತ್ತರವಿಲ್ಲದ ಪುಟ್ಟ ಬಾಗಿಲಿನಿಂದ ಅವರು ಬಗ್ಗಿ ಒಳಕ್ಕೆ ಪ್ರವೇಶಿಸುತ್ತಾರೆ. ಒಳಗೆ ಎರಡು ಮೂರು ಕೋಣೆಗಳಿವೆ' ಎಂದರು ಟೆಕ್ಕಿಸ್ ಮೋಹನ್.

ಅಲ್ಲೇ ಪಕ್ಕದ ಬಯಲಿನಲ್ಲಿ ಇನ್ನೊಂದು ವಿಶಿಷ್ಟ ದೇವ ಗುಡಿಯಿದೆ. ಅದೂ ಬೆತ್ತ, ಬಿದಿರು ಮತ್ತು ಹುಲ್ಲಿನಿಂದಲೇ ನಿರ್ಮಿಸಿದ್ದು. ಆದರೆ ಚೂಪು ಗೋಪುರದ ಮಾದರಿಯಲ್ಲಿ ಹುಲ್ಲಿನ ಸೂರು ಎತ್ತರವಿದೆ. 'ಪ್ರತಿವರ್ಷ ಡಿಸೆಂಬರ್‌ನ ಕೊನೆಯ ಭಾನುವಾರ ನಮ್ಮ ಹೊಸ ವರ್ಷದ ಉತ್ಸವ

## ಅಪರೂಪದ ಮ್ಯೂಸಿಯಂ

ಊಟಿಯ ಹೊರವಲಯದಲ್ಲಿ ತಮಿಳುನಾಡು ಸರ್ಕಾರದ 'ಬುಡಕಟ್ಟು ಸಂಶೋಧನೆ ಮತ್ತು ಅಭಿವೃದ್ಧಿ ನಿರ್ದೇಶನಾಲಯ'ವು (DTRD) ರೂಪಿಸಿರುವ ಸಂಶೋಧನಾ ಕೇಂದ್ರ ತೋಡರು ಮತ್ತು ಇತರ ಬುಡಕಟ್ಟು ಜನರ ಸಂಸ್ಕೃತಿ ರಕ್ಷಣೆಗೆ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಆದಿದ್ರಾವಿಡ ಮತ್ತು ಬುಡಕಟ್ಟು ಕಲ್ಯಾಣ ಇಲಾಖೆಗೆ ಪ್ರತ್ಯೇಕ ಸಚಿವರೇ ಇದ್ದಾರೆ. ಸುಮಾರು 25 ಎಕರೆಗಳಷ್ಟು ಭೂಪ್ರದೇಶ ಹೊಂದಿದ್ದು, ಬುಡಕಟ್ಟು ಜನರ ಕೃಷಿ ಬೆಳೆ ಮತ್ತು ಔಷಧೀಯ ಗಿಡಮೂಲಿಕೆಗಳನ್ನು ಬೆಳೆಯಲಾಗುತ್ತಿದೆ. ಬುಡಕಟ್ಟು ಮಕ್ಕಳ ಶಾಲೆಯೂ ಇದೆ.

ತಮಿಳುನಾಡಿನಲ್ಲಿ ವಿವಿಧ ಬುಡಕಟ್ಟುಗಳಿಗೆ ಸೇರಿದವರ ಜನಸಂಖ್ಯೆ 5.74 ಲಕ್ಷದಷ್ಟಿದೆ ಎನ್ನುವುದು ಒಂದು ಅಂದಾಜು. ಬುಡಕಟ್ಟು ಜನರು ಕೃಷಿ, ಹೈನುಗಾರಿಕೆಯಲ್ಲಿ ಸ್ವಾವಲಂಬನೆ ಸಾಧಿಸುವಂತೆ ಮಾಡುವುದರ ಜೊತೆಗೆ ಮುಖ್ಯವಾಹಿನಿಯಲ್ಲಿ ಒಳಗೊಳ್ಳಿಸಲು ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಅವರ ಕಲೆ, ಸಾಹಿತ್ಯಗಳ ರಕ್ಷಣೆ ಮತ್ತು ಪ್ರೋತ್ಸಾಹ, ವಿಚಾರ ಸಂಕಿರಣಗಳ ಆಯೋಜನೆ, ಪುಸ್ತಕಗಳ ಪ್ರಕಟಣೆ ಮುಂತಾಗಿ ವರ್ಷಪೂರ್ತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಇಲ್ಲಿರುವ ಗ್ರಂಥಾಲಯದಲ್ಲಿ ಮಾನವಶಾಸ್ತ್ರ, ಸಮಾಜಶಾಸ್ತ್ರ, ಜಾನಪದವಲ್ಲದೆ ಬುಡಕಟ್ಟು ಜನಾಂಗಗಳಿಗೆ ಸಂಬಂಧಿಸಿದ 6500ಕ್ಕೂ ಹೆಚ್ಚು ಪುಸ್ತಕಗಳಿವೆ.

ಇಲ್ಲಿರುವ ಮ್ಯೂಸಿಯಂ ಅತ್ಯುತ್ತಮವಾಗಿದೆ. ತಮಿಳುನಾಡಿನ ಎಲ್ಲ ಬುಡಕಟ್ಟು ಸಮುದಾಯಗಳ ಜೀವನ, ಭಾಷೆ, ಸಂಸ್ಕೃತಿಗಳ ವಿವರಗಳು ಇಲ್ಲಿವೆ. ತೋಡ, ಪನಿಯ, ಇರುಳ, ಕುರುಂಬರ್ ಮುಂತಾಗಿ ಹತ್ತಾರು ಬುಡಕಟ್ಟು ಜನಾಂಗಗಳು ಬಳಸುತ್ತಿದ್ದ ಪರಿಕರಗಳ ಸಂಗ್ರಹ, ದಾಖಲೆಗಳು ಗಮನ ಸೆಳೆಯುತ್ತವೆ.

ಸಂಶೋಧನಾ ಕೇಂದ್ರದಲ್ಲಿ ರಿಸರ್ಚ್ ಅಸಿಸ್ಟೆಂಟ್ ಆಗಿರುವ ಜಾನ್ಸಿ ರಾಣಿಯವರು ಮ್ಯೂಸಿಯಂನಲ್ಲಿ ಮಾತಿಗೆ ಸಿಕ್ಕಿದ್ದು ಆಕಸ್ಮಿಕವೇ. ಮ್ಯೂಸಿಯಂ ಮತ್ತು ವಿಶೇಷವಾಗಿ ತೋಡ ಸಮುದಾಯದ ಕುರಿತು ಅವರಿಂದಾಗಿ ಸಾಕಷ್ಟು ಮಾಹಿತಿಗಳು ಸಿಕ್ಕಿದವು. ಬಿ.ಎ. ಎಕನಾಮಿಕ್ಸ್ ಓದಿ, ಎಂ.ಐ.ಬಿ (ಮಾಸ್ಟರ್ಸ್ ಇನ್ ಇಂಟರ್‌ನ್ಯಾಷನಲ್ ಬಿಸಿನೆಸ್) ಸ್ನಾತಕೋತ್ತರ ಪದವಿ ಪಡೆದಿರುವ ಜಾನ್ಸಿ ರಾಣಿ, ತೋಡ ಸಮುದಾಯ ಶಿಕ್ಷಣದಲ್ಲಿ ಮುಂದುವರಿಯುತ್ತಿರುವುದಕ್ಕೆ ಸಾಕ್ಷಿಯೆಂಬಂತೆ ಇದ್ದಾರೆ. ಊಟಿಗೆ ಪ್ರತಿವರ್ಷ ಹೋಗುವ ಲಕ್ಷಾಂತರ ಪ್ರವಾಸಿಗರಲ್ಲಿ ಬಹುತೇಕರಿಗೆ ಹೀಗೊಂದು ಮ್ಯೂಸಿಯಂ ಇದೆ ಎನ್ನುವುದೇ ಗೊತ್ತಿಲ್ಲ.